ದಿನಾಂಕಃ16/03/2026 ಎಂ ವಿ ಸಿಃ 794/2024 ಪಿ ಡಬ್ಲೂ-01

**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

1. ನನ್ನ ತಂದೆ ಜೀವಂತ ಇಲ್ಲ ತಾಯಿ ಇದ್ದಾರೆ. ನನ್ನ ತಂದೆ ತಾಯಿಗೆ 4 ಜನ ಮಕ್ಕಳು ಅವರ ಪೈಕಿ 3 ಜನ ಗಂಡು ಮಕ್ಕಳು ಒಬ್ಬ ಹೆಣ್ಣುಮಗಳು. ಅವರ ಪೈಕಿ ಒಬ್ಬರು ತೀರಿಕೊಂಡಿದ್ದಾರೆ. ಅವರ ಹೆಂಡತಿ ಇದ್ದಾರೆ ಆದರೆ ಮಕ್ಕಳು ಇರುವುದಿಲ್ಲ. ನಮ್ಮ 4 ಜನರ ಮದುವೆ ಆಗಿರುತ್ತದೆ ಎಂದರೆ ಹೌದು. ಮದುವೆ ಆದ ನಂತರ ನಾವು 4 ಜನರು ಒಟ್ಟು ಕುಟುಂಬದಲ್ಲಿ ಇದ್ದೇವೆ ಆದರೆ ಮನೆ ಬೇರೆ ಬೇರೆಯಾಗಿ ವಾಸವಾಗಿದ್ದೇವೆ. ಆದಾರ ಕಾರ್ಡ ಪ್ರಕಾರ ನಾವು 4 ಜನರು ಬೇರೆ ಬೇರೆ ಊರಲ್ಲಿ ಬೇರೆ ಕಡೆ ವಾಸ ಇರುತ್ತೇವೆ ಅಂತ ಬರೆದಿದೆ ಎಂದರೆ ಸರಿ . ನಾವು ಎಲ್ಲ ವ್ಯಾಪಾರ

ಮಾಡಿಕೊಂಡು ಆ ಊರಿನಲ್ಲಿ ಹೆಂಡತಿ ಮಕ್ಕಳೊಂದಿಗೆ ವಾಸ ಮಾಡಿಕೊಂಡು ಇದ್ದೇವೆ ಎಂದರೆ ಹೌದು. ನಾವು ಒಟ್ಟು ಕುಟುಂಬದಲ್ಲಿ ಇದ್ದೇವೆ ಅಂತ ಹೇಳಲು ದಾಖಲಾತಿ ಇಲ್ಲ ಎಂದರೆ ಹೌದು. ನನ್ನ ತಾಯಿಯನ್ನು ನನ್ನ ಸಹೋದರ ವೆಂಕಟೇಶ್ ನೋಡಿಕೊಳ್ಳುತಿದ್ದಾರೆ. ತಂದೆ ತಾಯಿ , ವೆಂಕಟೇಶ್ ಆ ಮನೆಯಲ್ಲಿ ತುಂಬಾ ದಿನದಿಂದ ವಾಸ ಇದ್ದಾರೆ ಎಂದರೆ ಹೌದು. ತಂದೆ ಮತ್ತು ವೆಂಕಟೇಶ್ ಇಬ್ಬರು ಸೇರಿ ಜಮೀನು ನೋಡಿಕೊಳ್ಳುತಿದ್ದರು ಎಂದರೆ ತಂದೆ ಆ ಜಮೀನು ನೋಡಿಕೊಳ್ಳುತಿದ್ದರು ಎಂದು ಹೇಳುತ್ತಾರೆ. ವೆಂಕಟೇಶ್ ರವರಿಗೆ ಇಬ್ಬರು ಮಕ್ಕಳು. ಆ ಜಮೀನಿನಲ್ಲಿ ಬರುವ ಆದಾಯದ ಮೇರೆಗೆ ವೆಂಟೇಶ್ ಜೀವನ ಮಾಡುತಿದ್ದರು ಎಂದರೆ ಹೌದು. ಅದರಲ್ಲಿ 4 ಎಕರೆ ಜಮೀನು ಇರುತ್ತದೆ. ವೆಂಕಟೇಶ್ ರವರು 15-16 ವರ್ಷದ ಹಿಂದೆ ಮದುವೆ ಆಗಿರುತ್ತಾರೆ ಆಗಿನಿಂದ ಅವರು ಅದೇ ಜಮೀನು ನೋಡಿಕೊಂಡು ಜೀವನ ನಡೆಸುತಿದ್ದಾರೆ ಎಂದರೆ ಹೌದು. ಜಮೀನಿನಲ್ಲಿ ಬರುವ ಆದಾಯದಿಂದಲೇ ಅವರು ಜೀವನ ನಡೆಸುತಿದ್ದರು ಎಂದರೆ ಹೌದು. ಒಟ್ಟು ಕುಟುಂಬದಲ್ಲಿದ್ದೆವು ನಾವೆಲ್ಲರು ತಂದೆ ಆದಾಯದಿಂದ ಜೀವನ ನಡೆಸುತಿದ್ದೆವು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಚಿತ್ರದುರ್ಗದಲ್ಲಿ 8-10 ವರ್ಷದಿಂದ ವಾಸ ಇದ್ದೇನೆ. ನಾನು ವ್ಯವಹಾರ ಮಾಡಿಕೊಂಡು ಚಿತ್ರದುರ್ಗದಲ್ಲಿ ವಾಸ ಇದ್ದೆ. ಮರಣೋತ್ತರ ಪರೀಕ್ಷೆಗೆ 2 ಲಕ್ಷ, ವಾಹನ ಬಾಡಿಗೆಗೆ 25 ಸಾವಿರ ಖರ್ಚಾಗಿದೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ತಮ್ಮನ ಹೆಸರಿನಲ್ಲಿ ಜಮೀನು ದಾಖಲೆ ಹಾಜರಪಡಿಸಿಲ್ಲ ಎಂದರೆ ಹೌದು. ನಮ್ಮ 3 ಜನ ಗಂಡು ಮಕ್ಕಳ ಹೆಸರಿಗೆ ಜಮೀನು ಇದೆ. ತಂದೆ ಹೆಸರಿಗೆ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಅದರ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಿಂಗಳಿಗೆ 30 ಸಾವಿರ ಆದಾಯ ಬರುತಿತ್ತು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ಹಣದಲ್ಲಿ ನಾವು ಜೀವನ ನಡೆಸುತಿದ್ದೆವು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅವರು ತೀರಿಕೊಂಡಿದ್ದರಿಂದ ನಮಗೆ ಆದಾಯ ನುಕ್ಸಾನ ಆಗಿದೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಗೆ 72 ವರ್ಷ ವಯಸ್ಸು ಆಗಿತ್ತು. ನನ್ನ ತಂದೆ

ಜಮೀನಿನಲ್ಲಿ ಕೆಲಸ ಮಾಡುವುದು ಬಿಟ್ಟು ಸುಮಾರು ವರ್ಷ ಆಯಿತು ಎಂದರೆ ಸರಿಯಲ್ಲ. ಅವರು ಕೆಲಸಕ್ಕೆ ಹೋಗುತಿದ್ದರು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ ಮೋಟಾರ್ ಸೈಕಲ್ ಓಡಿಸಲು ಡಿಎಲ್ ಇರಲಿಲ್ಲ ಎಂದರೆ ಹೌದು ಆದ್ದರಿಂದ ನಾವು ಎಲೆಕ್ಟ್ರಿಕ್ ಗಾಡಿ ಕೊಡಿಸಿರುತ್ತೇವೆ. ಅಪಘಾತ ನನ್ನ ತಂದೆ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**
**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**